ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಸಾರ್ವಜನಿಕ ಉದ್ದೇಶಗಳಿಗಾಗಿ ಖಾಸಗಿ ಜಮೀನನ್ನು ಭೂಸ್ವಾಧೀನ ಕಾಯ್ದೆ 1894ರ ಅಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. ಈ ಕಾಯ್ದೆಯನ್ವಯ ಜಮೀನಿನ ಬೆಲೆಯನ್ನು ಪೂರ್ವಭಾವಿಯಾಗಿ ನಿಗಧಿಪಡಿಸಲು ಅವಕಾಶವಿಲ್ಲ.

ಆ) ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

847(1300) ಶ್ರೀ ಸಿದ್ದು ಸವದಿ (ಜಮಖಂಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಕೆಹೆಚ್‌ಡಿಸಿಯಲ್ಲಿ ಕೆಲಸ ಮಾಡುವ ಕೈಮಗ್ಗ ನೇಕಾರರ ಜೀವನ ಸ್ಥಿತಿ ಅತ್ಯಂತ ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಿಂದಿನ ವರ್ಷ ಸರ್ಕಾರ ನೇಕಾರರಿಗೆ ನೀಡಲಾಗಿದ್ದ ಸಾಲ ಮನ್ನಾ, ಬಡ್ಡಿ ಮನ್ನಾ ಮತ್ತು ವಿದ್ಯುತ್ ರಿಯಾಯಿತಿಯಂತಹ ಯಾವ ಸೌಲಭ್ಯಗಳಲ್ಲಿಯೂ ಸದರೀ ನೇಕಾರರಿಗೆ ಯಾವ ರೀತಿಯ ಸಹಾಯ ದೊರೆತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಸರ್ಕಾರದ ಎಲ್ಲಾ ಯೋಜನೆಗಳು ಕೇವಲ ಶ್ರೀಮಂತರಿಗಾಗಿಯೇ ಇವೆಯೇ ; ಹಾಗಿಲ್ಲದಿದ್ದಲ್ಲಿ, ಕೈಮಗ್ಗ ನೇಕಾರರಿಗೆ ಏಕೆ ಈ ಸೌಲಭ್ಯ ದೊರೆತಿರುವುದಿಲ್ಲ ;

ಈ) ಯಾವುದೇ ಸಂಘ ಅಥವಾ ಬ್ಯಾಂಕಿನವರು ಈ ಬಡವರಿಗೆ ಸಾಲ ಕೊಡಲು ಮುಂದೆ ಬರದಿಲ್ಲದಿರುವುದು ನಿಜವೇ ;

ಉ) ಬಂದಿದ್ದಲ್ಲಿ, ಇವರ ಗೃಹ ಸಾಲವನ್ನಾದರೂ ಮನ್ನಾ ಮಾಡಬೇಕೆಂದು ಬಂದಿರುವ ಬೇಡಿಕೆ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ (ಜವಳಿ ಸಚಿವರು)

ಅ) ರಾಜ್ಯದ ಸಮಸ್ತ ಕೈಮಗ್ಗ ನೇಕಾರರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸರ್ಕಾರದ ಆದೇಶಗಳ ಸಂಖ್ಯೆ:ಸಿಒ/58/ಸಿಎಲ್‌ಎಸ್/2007, ದಿ.16-4-2007, ಸಂಖ್ಯೆ:ಸಿಒ/59/ಸಿಎಲ್‌ಎಸ್/2007, ದಿ. 16-4-2007 ಮತ್ತು ಸಂಖ್ಯೆ:ಸಿಒ/61/ಸಿಎಲ್‌ಎಸ್/2007, ದಿ.16-4-2007 ರಂತೆ ನೇಕಾರರು ಸಹಕಾರಿ ಕ್ಷೇತ್ರದ ಬ್ಯಾಂಕುಗಳಿಂದ ಪಡೆದ ಸಾಲ ಮತ್ತು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನ ಮಾಡುವ ಬಗ್ಗೆ (ಷರುತ್ತಿಗಳಿಗೊಳಪಟ್ಟು)) ಆದೇಶ ಹೊರಡಿಸಲಾಗಿರುತ್ತದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ನಿಗಮವೇ ಕಚ್ಚಾಮಾಲನ್ನು ನೀಡುತ್ತಿದ್ದು, ನೇಕಾರರು ತಯಾರಿಸುವ ಸಿದ್ಧ ವಸ್ತ್ರಗಳಿಗೆ ಕನ್‌ವರ್ಶನ್ ಚಾರ್ಜಸ್ ನೀಡುತ್ತಿದೆ. ನೇಕಾರರು ನಿಗಮದಿಂದ ಪಡೆಯುವ ಕಚ್ಚಾಮಾಲಿಗೆ ಪೂರಕವಾಗಿ ನಿಗಮಕ್ಕೆ ತೇವಣಿ ನೀಡಲು ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರುತ್ತಾರೆ ಹಾಗೂ ವಸತಿ ಮತ್ತು ಕಾರ್ಯಾಗಾರಗಳ ನಿರ್ಮಾಣಕ್ಕಾಗಿ ನೇಕಾರರ ಪರವಾಗಿ ನಿಗಮವು ಹೆಚ್‌ಡಿಎಫ್‌ಸಿ ಮತ್ತು ರಾಜ್ಯ ಸರ್ಕಾರದಿಂದ ಸಾಲ ಪಡೆದಿರುತ್ತದೆ. ಕೆಹೆಚ್‌ಡಿಸಿ ನೇಕಾರರಾಗಲಿ, ಸಹಕಾರಿ ವಲಯದ ನೇಕಾರರಾಗಲಿ ಅಥವಾ ಅಸಂಘಟಿತ ನೇಕಾರರಾಗಲಿ ಇತರೇ ಹಣಕಾಸು ಸಂಸ್ಥೆಗಳಿಂದ ಪಡೆದ ದುಡಿಮೆ ಬಂಡವಾಳ ಸಾಲಗಳು ಮತ್ತು ಗೃಹ ಸಾಲಗಳು ಮೇಲ್ಕಂಡ ಸರ್ಕಾರದ ಆದೇಶಗಳನ್ವಯ ಅರ್ಹವಿರುವುದಿಲ್ಲ.

ಇ) ಸರ್ಕಾರದ ಆದೇಶದ ಸಂಖ್ಯೆ:ಸಿಒ/58/ಸಿಎಲ್‌ಎಸ್/2007, ದಿ. 16–4–2007, ಸಂಖ್ಯೆ:ಸಿಒ/59/ಸಿಎಲ್‌ಎಸ್/2007, ದಿ. 16–4–2007 ಮತ್ತು ಸಂಖ್ಯೆ:ಸಿಒ/61/ಸಿಎಲ್‌ಎಸ್/2007, ದಿ.16–4–2007 ರಂತೆ ನೇಕಾರರು ಸಹಕಾರಿ ಕ್ಷೇತ್ರದ ಬ್ಯಾಂಕುಗಳಿಂದ ಪಡೆದ ಸಾಲ ಮತ್ತು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನ ಮಾಡುವ ಬಗ್ಗೆ (ಷರತ್ತಿಗಳಿಗೊಳಪಟ್ಟು) ಆದೇಶ ಹೊರಡಿಸಲಾಗಿರುತ್ತದೆ.

ಈ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಕಾರ್ಯನಿರ್ವಹಿಸುತ್ತಿರುವ ನೇಕಾರರು ದುಡಿಮೆ ಬಂಡವಾಳ ಸಾಲವನ್ನು ರಾಷ್ಟ್ರೀಕೃತ ಬ್ಯಾಂಕುಗಳು/ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ/ಕರ್ನಾಟಕ ಹಿಂದುಳಿದ ಪಂಗಡಗಳ ಅಭಿವೃದ್ಧಿ ನಿಗಮದಿಂದ ಪಡೆದಿರುತ್ತಾರೆ. ಸದರಿ ದುಡಿಮೆ ಬಂಡವಾಳ ಸಾಲವನ್ನು ನೇಕಾರರು ನಿಗಮದಿಂದ ಪಡೆಯುವ ಕನ್‌ವರ್ಶನ್ ಚಾರ್ಜಸ್‌ನಿಂದ ಮರುಪಾವತಿ ಮಾಡಬೇಕಾಗಿರುತ್ತದೆ.

ಉ) ಸರ್ಕಾರದ ಆದೇಶಗಳ ಸಂಖ್ಯೆ:/58/ಸಿಎಲ್‌ಎಸ್/2007, ದಿ.16–4–2007, ಸಂಖ್ಯೆ:ಸಿಒ/59/ಸಿಎಲ್‌ಎಸ್/2007, ದಿ.16–4–2007 ಮತ್ತು ಸಂಖ್ಯೆ:ಸಿಒ/61/ಸಿಎಲ್‌ಎಸ್/2007, ದಿ.16–4–2007 ರಂತೆ ನೇಕಾರರು ಸಹಕಾರಿ ಕ್ಷೇತ್ರದ ಬ್ಯಾಂಕುಗಳಿಂದ ಪಡೆದ ಸಾಲ ಮತ್ತು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನ ಮಾಡುವ ಬಗ್ಗೆ (ಷರತ್ತಿಗಳಿಗೊಳಪಟ್ಟು) ಆದೇಶ ಹೊರಡಿಸಲಾಗಿರುತ್ತದೆ. ಸದರಿ ಆದೇಶಗಳ ವ್ಯಾಪ್ತಿಗೊಳಪಟ್ಟು ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

848(1110) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿಗ್ಗಾಂವ್ ತಾಲ್ಲೂಕು ಕಡಹಳ್ಳಿ, ಎನ್.ಎಂ. ತಡಸ ನೀರಲಾಗಿ ತಿಮ್ಮಾಪೂರ ಗ್ರಾಮಗಳ ಭಾಗಗಳಲ್ಲಿ ಅತಿವೃಷ್ಟಿಯಿಂದ ರೈತರು ಬಿತ್ತಿದ